ಮಂಗಳೂರು ವಿಭಾಗ

# ಸಾಂಘಿಕ್ ವಾರ್ತಾ

12 ಜನವರಿ 2013 ಪುಷ್ಯ ಶುದ್ಧ ಪಾಡ್ಯ ನಂದನ ಸಂವತ್ಸರ ಸಂಚಿಕೆ : 3

## ಕಾರ್ಯಕ್ರಮಗಳಿಂದ ಇಮ್ಮಡಿಗೊಂಡ ಉತ್ಸಾಹ

ವಿಭಾಗ ಸಾಂಘಿಕ್‌ನ ದಿನ ಸಮೀಪಿಸುತ್ತಿದ್ದಂತೆ ಹಲವಾರು ಕಡೆಗಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆದುದರ ವರದಿ ಬರುತ್ತಿದೆ. ಅನೇಕ ಸ್ಥಾನಗಳಲ್ಲಿ ಮೊದಲ ಬಾರಿಗೆ ಸಂಚಲನ ಮತ್ತು ಚಂದನ್‌ಗಳು ನಡೆದಿವೆ. ಗಣವೇಷದ ಮಾರಾಟವೂ ಭರದಿಂದ ಸಾಗುತ್ತಿದ್ದು ಸ್ವಯಂಸೇವಕರ ಉತ್ಸಾಹ ಇಮ್ಮಡಿಗೊಂಡಿದೆ, ವಿಶ್ವಾಸ ಹೆಚ್ಚುತ್ತಿದೆ.

ಪ್ರಾಯಶಃ ಕಳೆದ 30 ದಿನಗಳಲ್ಲಿ ವಿಭಾಗದಲ್ಲಿ ನಡೆದಷ್ಟು ಕಾರ್ಯಕ್ರಮಗಳು ಈ ಹಿಂದೆ ಎಂದೂ ಆಗಿರಲಿಕ್ಕಿಲ್ಲ.

### ಮಂಗಳೂರು ಗ್ರಾಮಾಂತರ ಜಿಲ್ಲೆ

ಮಂಜೇಶ್ವರ ತಾಲೂಕಿನ ಉಪ್ಪಳ ಮಂಡಲದ ಭತ್ತೇರಿ ಶಾಖೆಯ ಮುಖ್ಯಶಿಕ್ಷಕ ಶಾಖಾ ಸಮೀಪದ ಕಟ್ಟಡದ ಭಿತ್ತಿಪಲಕದಲ್ಲಿ ಸೂಚನೆಯೊಂದನ್ನು ನೀಡಿದ್ದ "ಭಾನುವಾರ ಸಮುದ್ರ ಕಿನಾರೆಯಲ್ಲಿ ನಡೆಯುವ ಪಥಸಂಚಲನಕ್ಕೆ ಎಲ್ಲಾ ಹಿಂದೂ ಬಾಂಧವರು ಭಾಗವಹಿಸಬೇಕು – ಇತೀ ಮುಖ್ಯ ಶಿಕ್ಷಕ" ಎಂದು ನಮೂದಿಸಿದ್ದ. ಇದಲ್ಲದೇ ಬೇರಾವುದೇ ವಿವರಗಳು ಇರಲಿಲ್ಲ. ಪರಿಣಾಮ 37 ಮಂದಿ ಹೊಸ ಗಣವೇಷಧಾರಿಗಳ ಸಹಿತ 101 ಮಂದಿ ಸಂಚಲನದಲ್ಲಿ ಭಾಗವಹಿಸಿದ್ದರು.

ಮಧೂರು ಮಂಡಲ ಸಂಚಲನ (210) ಮತ್ತು ಮೊಗ್ರಾಲ್ ಪುತ್ತೂರು ಮಂಡಲ ಸಂಚಲನ (78) ಇವುಗಳ ಸಂಗಮ ರಾಮದಾಸ ನಗರದಲ್ಲಿ ನಡೆಯಿತು. ಡಿಸೆಂಬರ್ 30 ರಂದು ನಡೆದ ಈ ಕಾರ್ಯಕ್ರಮದಲ್ಲಿ ಉಪವಿಷ್ಟ ವ್ಯಾಯಾಮ ಮತ್ತು ಗೀತೆಗಳ ಅಭ್ಯಾಸ ನಡೆಯಿತು.

ಮೊಗ್ರಾಲ್ ಪುತ್ತೂರು ಮಂಡಲದ ವಿಶ್ವಮಂಗಲ ಶಾಖೆಯ ಎಲ್ಲಾ 37 ಮಂದಿ ತರುಣರು ಪೂರ್ಣ ಗಣವೇಷದೊಂದಿಗೆ ಮತ್ತು ಆ ಎಲ್ಲಾ ತರುಣರ ಮನೆಯವರು ಸಾಂಘಿಕ್‌ನಲ್ಲಿ ಭಾಗವಹಿಸಲಿದ್ದಾರೆ.

(2ನೇ ಪುಟಕ್ಕೆ....)

## ಯೋಧರ ನಾಡು ಕೊಡಗಿನಲ್ಲಿ

**ಕಾಜೂರು ಸೋಮವಾರಪೇಟೆ ತಾಲೂಕಿನ ಒಂದು ಚಿಕ್ಕ ಗ್ರಾಮ. ಡಿಸೆಂಬರ್ 24 ರಂದು ಅಲ್ಲಿ ಚಂದನ್ ಕಾರ್ಯಕ್ರಮ. ಭಾಗವಹಿಸಿದವರು 500 ಕ್ಕೂ ಹೆಚ್ಚು ಮಂದಿ. ಎಲ್ಲಾ ಹಿಂದು ಮನೆಗಳೂ ಪ್ರತಿನಿಧಿತವಾಗಿದ್ದವು. ಮಾತಾಭಗಿನಿಯರ ಸಂಖ್ಯೆಯೇ ಅಧಿಕ. ವಿಶೇಷ ದೀಪಾಲಂಕಾರ ಎಲ್ಲರ ಗಮನವನ್ನು ಸೆಳೆಯಿತು. 130 ಜನ ಗಣವೇಷದಲ್ಲಿ ಪಾಲ್ಗೊಂಡಿದ್ದರು. 8 ಕಬಡ್ಡಿ ತಂಡಗಳು ರಾತ್ರಿ 10 ಗಂಟೆವರೆಗೂ ಆಟವಾಡುತ್ತಿದ್ದವು. ಅದಕ್ಕೆ ಮಾತಾಭಗಿನಿಯರು ಪ್ರೋತ್ಸಾಹ ನೀಡುತ್ತಿದ್ದ ವಾತಾವರಣ – ಒಟ್ಟಿನಲ್ಲಿ ಗ್ರಾಮದಲ್ಲಿ ಹಬ್ಬದ ಸಂಭ್ರಮ ಏರ್ಪಟ್ಟಿತ್ತು.**

**ಡಿಸೆಂಬರ್ 30 ರಂದು ಸೋಮವಾರಪೇಟೆ ನಗರದ ಸಂಚಲನಕ್ಕೆ ಅನಿರೀಕ್ಷಿತವಾಗಿ ಮಳೆರಾಯನ ಆಗಮನ ! ಸುರಿಯುವ ಮಳೆಯಲ್ಲೇ 80 ತರುಣರು ಸಂಚಲನದಲ್ಲಿ ಭಾಗವಹಿಸಿದ್ದರು. ಅದಕ್ಕೂ ಮುನ್ನ ತಾಲೂಕಿನ ಎಲ್ಲಾ ಮಂಡಲಗಳಿಗೂ 48 ಬೈಕ್‌ಗಳ ರ್‍ಯಾಲಿಯೊಂದನ್ನು ಯೋಜಿಸಲಾಗಿತ್ತು. ಕೊಡ್ಲಿಪೇಟೆಯಲ್ಲಿ 85 ಮಂದಿಯ ಪೂರ್ಣ ಗಣವೇಷಧಾರಿಗಳ ಸಂಚಲನ ನಡೆಯಿತು.**

**ಮಡಿಕೇರಿ ಗ್ರಾಮಾಂತರ ತಾಲೂಕಿನ ಮಕ್ಕಂದೂರು ಚಂದನ್ ಕಾರ್ಯಕ್ರಮದಲ್ಲಿ 210 ಮಂದಿ ಉಪಸ್ಥಿತರಿದ್ದರು. ಕುಶಾಲನಗರ ತಾಲೂಕಿನ ಶುಂಠಿಕೊಪ್ಪದ ಚಂದನ್‌ನಲ್ಲಿ 250 ಉಪಸ್ಥಿತಿ.**

**ಗೋಣಿಕೊಪ್ಪ ನಗರ ಚಂದನ್‌ನಲ್ಲಿ 250 ಮಂದಿ ಉಪಸ್ಥಿತಿ, 110 ಮಂದಿ ನಿಕ್ಕರ್ ಧರಿಸಿದ್ದರು, 50 ಮಂದಿ ಮಾತೆಯರೂ ಭಾಗವಹಿಸಿದ್ದರು.**

**ಮಡಿಕೇರಿ ಗ್ರಾಮಾಂತರ ತಾಲೂಕಿನ ಮೇಕೇರಿಯಲ್ಲಿ ನಡೆದ ಚಂದನ್‌ನಲ್ಲಿ ಎಲ್ಲಾ ಹಿಂದು ಮನೆಗಳಿಂದ 400 ಜನ ಭಾಗವಹಿಸಿದ್ದರು.**

**ಪ್ರತಿ ಭಾನುವಾರ ಐಗೂರು ಗ್ರಾಮದಲ್ಲಿ ನಡೆಯುತ್ತಿರುವ ಸಾಂಘಿಕ್‌ನಲ್ಲಿ ಸರಾಸರಿ ಉಪಸ್ಥಿತಿ 50 ದಾಟಿದೆ.**

**ಇವಲ್ಲದೆ ಮಡಿಕೇರಿ ನಗರ, ವಿರಾಜಪೇಟೆ ತಾಲೂಕಿನ 7 ಕಡೆಗಳಲ್ಲಿ – ಕಿರುಗೂರು, ಗೋಣಿಕೊಪ್ಪ, ಹುದಿಕೇರಿ ಈ ಮೂರು ಮಂಡಲ, ಮತ್ತು ದೇವರಪುರ, ಕಲತ್‌ಮಾಡು, ಕೆದಮಲ್ಲೂರು, ಹಾತೂರು ಈ 4 ಗ್ರಾಮ, ಕುಶಾಲನಗರದ ನಂಜರಾಯಪಟ್ಟಣ ಇಲ್ಲೆಲ್ಲಾ ಚಂದನ್‌ಗಳು ನಡೆದಿವೆ.**

**ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆ, ಶುಂಠಿಕೊಪ್ಪ, ವಿರಾಜಪೇಟೆ, ಗೋಣಿಕೊಪ್ಪಗಳಲ್ಲಿ ಸಂಚಲನ ನಡೆದಿದೆ.**

# ಮೆಲುಕು 1983ರ ವಿಭಾಗ ತರುಣ ಸಮಾವೇಶ

1983ರ ಫೆಬ್ರವರಿಯಲ್ಲಿ ಮಂಗಳೂರಿಗೆ ಅಂದಿನ ಸಹಸರಕಾರ್ಯವಾಹ ಮಾನ್ಯ ಶ್ರೀ ಯಾದವರಾವ್‌ಜೀಯವರ ಪ್ರವಾಸ. ಆಗ ಮಂಗಳೂರು ನಗರದಲ್ಲಿ 101 ಉಪಶಾಖೆಗಳು ನಡೆಯುತ್ತಿದ್ದ ಉತ್ಸಾಹದ ವಾತಾವರಣ.

## ಸವಾಲು ಸ್ವೀಕಾರ

ಮಾನ್ಯ ಯಾದವರಾವ್‌ಜೀಯವರು ಕೇಳಿದರು "ಅದೆಲ್ಲಾ ಸರಿ, ನೀವು ಈ ವಿಭಾಗದ 10,000 ಸ್ವಯಂಸೇವಕರ ಸಂಚಲನವನ್ನು ಮಾಡಲು ಸಾಧ್ಯವಿಲ್ಲವೇ?" ಪದವೇಷದ ಆಗ್ರಹವಿಲ್ಲದಿದ್ದರೆ ಮಾಡಬಹುದೆಂದು ಸಂಘದ ಕಾರ್ಯಕರ್ತರೊಬ್ಬರು ನುಡಿದಾಗ 'ಅದಾಗದು, ಆಗುವುದಿದ್ದರೆ ಪದವೇಷ ಸಹಿತ 10 ಸಹಸ್ರ ಸ್ವಯಂಸೇವಕರ ಸಮಾವೇಶ ಆಗಬೇಕು' ಎಂದು ಅಪೇಕ್ಷೆ ಪಟ್ಟರು. ಜೂನ್ ತಿಂಗಳಲ್ಲಿ ತಾಲೂಕು ಕಾರ್ಯವಾಹರು ಸೇರಿದಾಗಲೂ ಅನೇಕ ಕಾರ್ಯಕರ್ತರ ಮನಸ್ಸಿನಲ್ಲಿ 'ಇದು ನಮ್ಮ ಈಗಿನ ಸಾಮರ್ಥ್ಯಕ್ಕೆ ಮೀರಿದ್ದೋ ಏನೋ' ಎಂಬ ಸಣ್ಣ ಸಂಶಯದ ಸುಳಿ.

ಹಿರಿಯರ ಅಪೇಕ್ಷೆಯನ್ನು ಸವಾಲಾಗಿ ಸ್ವೀಕರಿಸಿದವರು ಅಂದಿನ ವಿಭಾಗ ಸಂಘಚಾಲಕ್ ಮಾ॥ ಪಂಚಮಾಲ್ ವಾಸುದೇವ ಕಾಮತರು.

**ಪರಿಣಾಮ** : ನವೆಂಬರ್ 13 ರಂದು ನಡೆದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗಣವೇಷಧಾರಿ ಸ್ವಯಂಸೇವಕರ ಸಂಖ್ಯೆ 13,064.

**ಸಮಾವೇಶದಲ್ಲಿ ಕಾಣದ ಪಾಕಶಾಲೆ** : ಸಾಮಾನ್ಯವಾಗಿ ಸಂಘದ ಶಿಬಿರ, ಸಮಾವೇಶಗಳಲ್ಲಿ ಸ್ವಯಂಸೇವಕರ ಊಟ, ಉಪಾಹಾರಗಳ ವ್ಯವಸ್ಥೆಗಾಗಿ ಪಾಕಶಾಲಾ ವಿಭಾಗ ಇರುವುದು ಮಾಮೂಲಿಯಾದ ರೂಢಿ. ಆದರೆ ಬೆಳಿಗ್ಗೆಯಿಂದ ಸಂಜೆವರೆಗೆ ನಡೆದ ಈ ಸಮಾವೇಶದಲ್ಲಿ ಪಾಕಶಾಲೆಯೇ ಇರಲಿಲ್ಲ.

- ವಿಭಾಗದ ವಿವಿಧೆಡೆಗಳಿಂದ ಬಂದ ಸಾವಿರಾರು ಸ್ವಯಂಸೇವಕರಿಗೆ ಮಂಗಳೂರು ನಗರದ ಜನತೆ ಆತಿಥ್ಯವನ್ನು ನೀಡಿತು.
- ಮಂಗಳೂರು ನಗರದ ಮನೆಮನೆಗಳಿಂದ ಸಿದ್ಧವಾಗಿ ಬೆಳಗ್ಗಿನ ಉಪಾಹಾರಕ್ಕೆ ಬಂದ ಚಪಾತಿಗಳು 98,000 ಕ್ಕೂ ಹೆಚ್ಚು.
- ಮಧ್ಯಾಹ್ನ ಸಂಘನಿಕೇತನದಿಂದ ಒಂದೂವರೆ ಕಿ.ಮೀ. ವ್ಯಾಪ್ತಿಯೊಳಗಿನ 2900 ಮನೆಗಳಲ್ಲಿ ಎಲ್ಲರಿಗೂ ಭೋಜನ ವ್ಯವಸ್ಥೆ. ಮುಸ್ಲಿಂ, ಕ್ರಿಶ್ಚಿಯನ್, ಕಮ್ಯೂನಿಸ್ಟ್ ಮನೆಗಳೂ ಭೋಜನ ನೀಡಲು ಸಿದ್ಧವಾದವು.

ಸಂಜೆ ಸಂಚಲನದ ನಂತರ ಕೇಂದ್ರ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮಾ। ಯಾದವರಾವ್‌ಜೀಯವರಿಂದ ಉದ್ಬೋಧನೆ. ಮಂಗಳೂರಿನ ಮೊಟ್ಟಮೊದಲ ಪ್ರಚಾರಕರಾಗಿದ್ದ ಶ್ರೀ ಅಣ್ಣಾಶೇಷರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳು. ಅದಕ್ಕಾಗಿಯೇ ಅವರು ಮಹಾರಾಷ್ಟ್ರದಿಂದ ಬಂದಿದ್ದರು.

### ಅಂಕಿ ಅಂಶಗಳು

| ಜಿಲ್ಲೆ | ಗಣವೇಷ |
|---|---|
| ಮಂಗಳೂರು ಮಹಾನಗರ | 2157 |
| ಮಂಗಳೂರು ಗ್ರಾಮಾಂತರ | 4091 |
| ಉಡುಪಿ | 2710 |
| ಪುತ್ತೂರು | 4106 |
| **ಒಟ್ಟು** | **13064** |

1ನೇ ಪುಟದಿಂದ....

## ಇಮ್ಮಡಿಗೊಂಡ ಉತ್ಸಾಹ

ಕಾಸರಗೋಡು ನಗರದ ಶಕ್ತಿ ಶಾಖೆಯ 35 ಸ್ವಯಂಸೇವಕರು ಪಂಜಿನ ಬೆಳಕಿನಲ್ಲಿ ತಮ್ಮ ಉಪವಸತಿಯಲ್ಲಿ ಸಂಪರ್ಕ ಮಾಡಿದರು.

ಬದಿಯಡ್ಕದಲ್ಲಿ ನಡೆದ ಸಂಚಲನದಲ್ಲಿ – ಬದಿಯಡ್ಕ, ನೀರ್ಚಾಲು, ಕಲಂಬಾಜೆ, ಎಡನೀರು ಗ್ರಾಮಗಳ ಒಟ್ಟು 183 ಗಣವೇಷಧಾರಿ ಸ್ವಯಂಸೇವಕರು ಭಾಗವಹಿಸಿದ್ದರು.

ಮಂಜೇಶ್ವರ ತಾಲೂಕಿನ ಪುತ್ತಿಗೆ ಮಂಡಲದಲ್ಲಿ ಎಲ್ಲಾ ಗ್ರಾಮಗಳಿಂದ 112 ಸಂಖ್ಯೆಯ ಸಂಚಲನ ನಡೆಯಿತು. ಈವರೆಗೆ ಈ ಮಂಡಲದ ದೊಡ್ಡ ಸಂಚಲನ ಇದೇ ಆಗಿದೆ.

ಮಂಜೇಶ್ವರ ಮಂಡಲದಲ್ಲಿ 205 ಜನರ, ಕುಂಬಳೆ ಮಂಡಲದಲ್ಲಿ 145 ಜನರ ಸಂಚಲನಗಳಾಗಿವೆ.

ಮೂಡಬಿದ್ರೆ ತಾಲೂಕಿನ ಬೆಳವಾಯಿ ಕೇಂದ್ರದ ಅಚ್ಚರಕಟ್ಟೆ ಉಪವಸತಿಯಲ್ಲಿ ಪಂಜಿನ ಬೆಳಕಿನಲ್ಲಿ ನಡೆದ ಭಾರತಮಾತಾ ಪೂಜನ ಕಾರ್ಯಕ್ರಮದಲ್ಲಿ 60 ಜನ ತಾಯಂದಿರು, 120 ಜನ ಪುರುಷರು ಭಾಗವಹಿಸಿದ್ದರು.

ಮುಲ್ಕಿ ನಗರದ ಸದಾಶಿವ ನಗರದ ಉಪವಸತಿಯಲ್ಲಿ ಭಾರತಮಾತಾ ಪೂಜನ ಕಾರ್ಯಕ್ರಮ ನಡೆದಿದೆ. ಸಂಖ್ಯೆ 108. ಮುಲ್ಕಿ ಮತ್ತು ಕಿಲ್ಪಾಡಿ ಮಂಡಲದ ಬೈಕ್ ರ‍್ಯಾಲಿಯಲ್ಲಿ 49 ಬೈಕ್ ಮತ್ತು ಒಂದು ಕಾರು ಭಾಗವಹಿಸಿತ್ತು.

## ಮಂಗಳೂರು ಮಹಾನಗರ

ಜ.6 ರಂದು ಕಣ್ಣೂರು ನಗರ ಉಪವಸತಿಯ ಶ್ರೀ ಹರ್ಷ, ಕೇಶವ ಉಪವಸತಿಗಳಲ್ಲಿ ಬೈಕ್‌ರ‍್ಯಾಲಿ ಏರ್ಪಡಿಸಲಾಗಿತ್ತು. 77 ಮಂದಿ ಪೂರ್ಣ ಗಣವೇಷದೊಂದಿಗೆ 44 ಬೈಕ್‌ಗಳಲ್ಲಿ 20 ಕಿ.ಮೀ. ದೂರ ಕ್ರಮಿಸುವ ಮೂಲಕ 11 ವಸತಿಗಳನ್ನು ಸಂಚರಿಸಿದ್ದರು. ಸಂಚಲನದ ವಿಶೇಷವೆಂದರೆ ತೆರೆದ ವಾಹನದಲ್ಲಿ ಭಗವಾಧ್ವಜ ಸಹಿತ ಪಥಸಂಚಲನದಂತೆ 2 ಸಾಲುಗಳಲ್ಲಿ ಸಮ್ಯಕ್ ಸಹಿತ – ಕ್ರಮಬದ್ಧವಾಗಿ ಸಂಚಲನ ನಡೆಯಿತು. ಹಲವೆಡೆ ಭಗವಾಧ್ವಜಕ್ಕೆ ಪುಷ್ಪಾರ್ಚನೆ ಮಾಡಿದ್ದರು.

ನಾರಾಯಣಗುರು ವಸತಿಯಲ್ಲಿ 160 ಮಂದಿಯ ಸಂಚಲನ ನಡೆಯಿತು. 32 ಮಂದಿ ಹೊಸಬರು ಭಾಗವಹಿಸಿದ್ದರು.

ಕಾವೂರು ನಗರ ದೇರೆಬೈಲ್‌ನ ಒಂದು ಉಪವಸತಿಯಲ್ಲಿ 3 ಮಂದಿ ಸ್ವಯಂಸೇವಕರು ಬೆಳಗಿನಿಂದ ಮಧ್ಯಾಹ್ನವರೆಗೆ ಸಂಪರ್ಕ ಮಾಡಿ 121 ಮಂದಿ ಹೊಸದಾಗಿ ಗಣವೇಷ ಖರೀದಿಸುವಂತೆ ಮಾಡಿದ್ದಾರೆ.

## ಪುತ್ತೂರು ಜಿಲ್ಲೆ

ಪುತ್ತೂರು ಜಿಲ್ಲೆಯಲ್ಲಿ ಕಳೆದೊಂದು ತಿಂಗಳಲ್ಲಿ 31 ಸಂಚಲನ, 32 ಚಾಂದನಿ, ಸಾಂಘಿಕ್‌ಗಳು ಏರ್ಪಟ್ಟಿವೆ.

ಬೆಳ್ತಂಗಡಿ ತಾಲೂಕಿನ 3 ಕಾಲೇಜುಗಳಿಂದ 55 ವಿದ್ಯಾರ್ಥಿಗಳು ವಿಸ್ತಾರಕರಾಗಿ ಹೊರಟಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕಾಂಟ್ರಾಕ್ಟ್‌ದಾರರೋರ್ವರು ತಮ್ಮ ಎಲ್ಲಾ ಕಾರ್ಮಿಕರನ್ನು ಮಾತನಾಡಿಸಿ ಗಣವೇಷದಲ್ಲಿ ಹೊರಡಿಸುತ್ತಿದ್ದಾರೆ.

ವ್ಯಕ್ತಿ ನಿರ್ಮಾಣದಿಂದಲೇ ರಾಷ್ಟ್ರ ನಿರ್ಮಾಣ



ಸಂಪಾದಕರು : ಶ್ರೀ ಗಜಾನನ ಪೈ    ಮುದ್ರಕರು : ದಿಗಂತ ಮುದ್ರಣ, ಮಂಗಳೂರು – 8    ಅಕ್ಷರ ಜೋಡಣೆ : ಅಕ್ಷರೋದ್ಯಮ